# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ, ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ: 16-03-2021 ರಂದು ಮಾರ್ಚ್-2021 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ: 16.03.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

ಹಾಜರಿದ್ದ ಸದಸ್ಯರು:-

1. ಶ್ರೀ ಕೆ.ಎನ್. ಆಚಾರ್ಯ
2. ಶ್ರೀಮತಿ. ಸಿ. ಕುಸುಮ
3. ಶ್ರೀಮತಿ ಪ್ರೇಮ ಕುಮಾರಿ .ಎನ್
4. ಶ್ರೀ ಸಾಜಿ ಜಾರ್ಜ್
5. ಶ್ರೀ ಪ್ರೇಮ ಮಂಜುನಾಥ
6. ಶ್ರೀ ಎಂ.ಎ. ಪೊನ್ನಪ್ಪ

ಹಾಜರಿದ್ದ ಅಧಿಕಾರಿಗಳು:-

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
2. ಶ್ರೀ ಮುತ್ತಣ್ಣ, ಕಂದಾಯ ಪರಿವೀಕ್ಷಕರು
3. ಶ್ರೀ ಶಂಕರ್‌ಗೌಡ, ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ ನರಸಿಂಹಯ್ಯ, ಸೂಪರ್‌ವೈಸರ್, ಬಿ.ಬಿ.ಎಂ.ಪಿ
5. ಶ್ರೀ ಎನ್. ದಿನೇಶ್, ಎ.ಎಸ್.ಐ. ಸಂಚಾರ ಪೋಲಿಸ್ ಠಾಣೆ, ಮಡಿವಾಳ

* * * * *

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ವಾರ್ಡ್ ಸಮಿತಿ ಸಭೆಗೆ ಸತತವಾಗಿ ಮೂರು ಬಾರಿ ಗೈರು ಹಾಜರಾಗಿರುವ ಇಲಾಖಾ ಅಧಿಕಾರಿಗಳಿಗೆ ನೋಟಿಸ್‌ಗಳನ್ನು ನೀಡುವಂತೆ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಲಾಯಿತು.

ಕ್ರಮ: ಸದಸ್ಯ ಕಾರ್ಯದರ್ಶಿ/ ನೋಡಲ್ ಅಧಿಕಾರಿ

ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿದ ಪರಿಣಾಮವಾಗಿ ಹೆಚ್.ಎಸ್.ಆರ್. 5ನೇ ಹಂತ, 13ನೇ ಮುಖ್ಯರಸ್ತೆ ಸ್ಮಶಾನದ ಪಕ್ಕದ ರಸ್ತೆಯಲ್ಲಿ ಬೆಸ್ಕಾಂ ವತಿಯಿಂದ ವಿದ್ಯುತ್ ಕಂಬವನ್ನು ಅಳವಡಿಸಲಾಗಿದ್ದು, ಬೀದಿ ದೀಪಗಳನ್ನು ಅಳವಡಿಸಲು ಸಂಬಂಧಪಟ್ಟ ಇಲಾಖೆಯಾದ ಎಲೆಕ್ಟ್ರಿಕಲ್ ವಿಭಾಗ, ಬಿ.ಬಿ.ಎಂ.ಪಿ ರವರಿಗೆ ಸೂಚಿಸಲಾಯಿತು. ಮುಂದುವರೆದು, 5ನೇ ಅಡ್ಡರಸ್ತೆ ಸಿ.ಎ.ಡಿ. ಸ್ಕೂಲ್ ಹತ್ತಿರ 4ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆಯ ಬಳಿ ಬೀದಿ ದೀಪಗಳು ಹಾಳಾಗಿದ್ದು, ಸರಿಪಡಿಸಲು ಸಭೆಯಲ್ಲಿ ಸೂಚಿಸಲಾಯಿತು.

ಕ್ರಮ: ಕಾರ್ಯಪಾಲಕ ಅಭಿಯಂತರರು
ಎಲೆಕ್ಟ್ರಿಕಲ್ ವಿಭಾಗ, ಬಿ.ಬಿ.ಎಂ.ಪಿ



Scanned by CamScanner

ಹೆಚ್.ಎಸ್.ಆರ್ 5ನೇ ಬಡಾವಣೆ 13ನೇ ಮುಖ್ಯರಸ್ತೆಯ ಬಿ.ಡಿ.ಎ ಫ್ಲೈ ಓವರ್ ಹತ್ತಿರವಿರುವ ದೇವಿ ಕಣ್ಣಿನ ಆಸ್ಪತ್ರೆ ಬಳಿಯಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅನ್ನು ಸರ್ವೀಸ್ ರಸ್ತೆಯ ತಿರುವಿನಲ್ಲಿ ಅಡ್ಡಲಾಗಿ ಹಾಕಲಾಗಿದ್ದು, ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ಟ್ರಾನ್ಸ್‌ಫಾರ್ಮರ್ ಅನ್ನು ಒಳಭಾಗದಲ್ಲಿ ಹಾಕಲು ಸಭೆಯಲ್ಲಿ ತಿಳಿಸಲಾಯಿತು.

ಈಗಾಗಲೇ ಬೆಸ್ಕಾಂ ವತಿಯಿಂದ ಫೀಡರ್ ಕೇಬಲ್‌ಗಳನ್ನು ಅಳವಡಿಸಲು ಬೆಸ್ಕಾಂ ಕಂಬದ ಪಕ್ಕದಲ್ಲಿ ಗುಂಡಿಗಳನ್ನು ಡಾಂಬರೀಕರಣದಿಂದ ಮುಚ್ಚಲು ಹಾಗೂ ರಸ್ತೆಯ ಮೇಲೆ ಹೆಚ್ಚುವರಿಯಾಗಿ ಬಿದ್ದಿರುವ ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೆಸ್ಕಾಂ ಇಲಾಖೆ

ಶ್ರೀ ಪೊನ್ನಪ್ಪ ರವರು ಮಾತನಾಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಜಕ್ಕಸಂದ್ರ ವ್ಯಾಪ್ತಿಯಲ್ಲಿ ಮಳೆ ನೀರು ಹರಿವಿನ ಸಮಗ್ರ ನಕ್ಷೆಯನ್ನು ಹಾಗೂ ಒಳಚರಂಡಿ ವ್ಯವಸ್ಥೆಯ ಬಗ್ಗೆ ಸಭೆಗೆ ತಿಳಿಸಿಕೊಡಲು ತಿಳಿಸಿದರು.

10ನೇ ಅಡ್ಡರಸ್ತೆಯಲ್ಲಿ ಬಿ.ಬಿ.ಎಂ.ಪಿ. ವತಿಯಿಂದ ರಸ್ತೆ ಕಾಮಗಾರಿಯನ್ನು ಕೈಗೊಳ್ಳುತ್ತಿದ್ದು, ಕಾಮಗಾರಿ ವೇಳೆಯಲ್ಲಿ ಒಳಚರಂಡಿ ಲೈನ್‌ಗೆ ಹಾನಿ ಉಂಟಾದರೆ ಕೂಡಲೇ ಸರಿಪಡಿಸಿ, ಕಾಮಗಾರಿಯನ್ನು ಮುಂದುವರೆಸಲು ಸೂಚಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ

ಜಕ್ಕಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯಲ್ಲಿ ಸತ್ತವರ ಹೆಸರುಗಳನ್ನು ಪಟ್ಟಿಯಲ್ಲಿ ತೆಗೆದು ಹಾಕುವುದು ಮತ್ತು ಮತದಾರರ ವಿಳಾಸಗಳ ಬದಲಾವಣೆ ಹಾಗೂ ಹೊಸದಾಗಿ ಸೇರ್ಪಡೆಗೊಳ್ಳುವವರನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವಂತೆ ಸಭೆಯಲ್ಲಿ ತಿಳಿಸಿದರು.

ಕ್ರಮ: ಸಹ ಕಂದಾಯ ಅಧಿಕಾರಿಗಳು
ಕಂದಾಯ ಇಲಾಖೆ

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

16/03/2021
(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-173 ಜಕ್ಕಸಂದ್ರ

16-03-2021
(ಶ್ರೀ ಸಂಜೀವಕುಮಾರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-173 ಜಕ್ಕಸಂದ್ರ



Scanned by CamScanner

ಸ್ಥಳೀಯ ಅಧಿಕಾರಿಗಳ ಜಾಗೃತಿ ಸಭೆ
ನಡೆ ದಿ: 16/03/2021 at 11.00 am

<u>ಹಾಜರಿದ್ದ ಅಧಿಕಾರಿಗಳು</u>:

1) Sanjeev Kumar Supervisor (BBMP)
2) S Muthanna RTW 173
3) Shankargowda (BWSSB) WT
4) C. Narasimhalu Supervisor (BBMP)
5) N. Dinesh A.S.I. Traffic PS Madivala
6) Jayarama naik. K. JE Bescom

ಹಾಜರಿದ್ದ ಸದಸ್ಯರು.

1. M. K. N. Acharya, President RWA 5th Sector — 16/3/2021
2. C. Kusuma — C. Kusuma
3. Prema Kumari N
4. SAJI GEORGE
5. ~~S Muthanna~~
6. ~~Sadashivan~~
7. ~~Shankargowda~~
8. Dr. Laxman. M
9. Prema. Manjunatha. V.K



Scanned by CamScanner



Scanned by CamScanner